



ಅಥವಾ ಆಲಿಕಲ್ಲು ಮಳೆ ಬರುವ ಬಗ್ಗೆ ಎಚ್ಚರಿಕೆ ನೀಡಬೇಕಿದೆ.

ಎಷ್ಟೋ ರೈತರು ಈ ಬದಲಾಗುತ್ತಿರುವ ಮಳೆಗಾಲಕ್ಕೆ ಸ್ವತಃ ತಾವೇ ಪರ್ಯಾಯಗಳನ್ನು ಕಂಡುಕೊಂಡು ಅನುಸರಿಸುವುದನ್ನು ಕಾಣುತ್ತೇವೆ. ತುಮಕೂರು, ಚಿತ್ರದುರ್ಗ ಭಾಗದಲ್ಲಿ ನೆಲಗಡಲೆ ಮುಖ್ಯ ಬೆಳೆ. ಏಳೆಂಟು ವರ್ಷಗಳ ಹಿಂದೆ ಪುನರ್ವಸು ಮಳೆಗೆ ಸಾಮಾನ್ಯವಾಗಿ ನೆಲಗಡಲೆ ಬಿತ್ತನೆ ಮಾಡುತ್ತಿದ್ದರು. ಆದರೆ ಅವಧಿಗೆ ಮುನ್ನವೇ ಮಳೆ ಬರುವುದನ್ನು ಗಮನಿಸಿ ಇತ್ತೀಚಿನ ವರ್ಷಗಳಲ್ಲಿ ಆರಿದ್ರಾ ಹಾಗೂ ಮೃಗಶಿರಾ ಮಳೆಗಳಿಗೇ ಬಿತ್ತಲು ಆರಂಭಿಸಿದ್ದಾರೆ. ಅವರ ಪ್ರಯತ್ನ ಯಶಸ್ವಿಯಾಗುತ್ತಿದೆ.

ಕೊಪ್ಪಳ ಭಾಗದಲ್ಲಿ ವಾಡಿಕೆಗಿಂತ ಮುಂಚೆಯೇ ಮಳೆ ಬಂದು ಹದವಾದಾಗ ಹೆಸರುಕಾಳು ಬಿತ್ತಿರುವ ಉದಾಹರಣೆಗಳಿವೆ. ಕೆಲವೇ ರೈತರು ಈ ರೀತಿ ಪ್ರಯೋಗವನ್ನು ಮಾಡಿದ್ದರೂ ಮೂರ್ನಾಲ್ಕು ವರ್ಷಗಳು ಹೀಗೇ ಮುಂದುವರಿದರೆ ಉಳಿದವರೂ ಅನುಸರಿಸುತ್ತಾರೆ. ಕ್ರಮೇಣ ಅದೇ ರೂಢಿಯಾಗುತ್ತದೆ. ಈ ರೀತಿ ಮುಂದಾಲೋಚನೆ ಮಾಡದ ರೈತರು ಬಿತ್ತನೆ ಕಾಲ ಮೀರಿದರೂ ಮಳೆ ಬಾರದಿದ್ದಾಗ ಅಸಹಾಯಕರಾಗಿ ಹೊಲ ಬೀಳು ಬಿಡುತ್ತಾರೆ. ಇತ್ತೀಚೆಗೆ ಈ ಪ್ರವೃತ್ತಿ ತುಂಬಾ ಹೆಚ್ಚುತ್ತಿದೆ.

## ದೇಸಿ ತಳಿಗಳ ಗಟ್ಟಿತನ

ಅಕಾಲಿಕ ಮಳೆ ನಿರ್ವಹಣೆಯ ಮತ್ತೊಂದು ಉಪಾಯವೆಂದರೆ ದೇಸಿ ಬೆಳೆ ಹಾಗೂ ತಳಿಗಳನ್ನು ಬಿತ್ತುವುದು. ಕುಸುಬೆ, ಹರಳು, ಸಿರಿಧಾನ್ಯಗಳು, ಪುಂಡಿ, ಬಿಳಿಜೋಳ ಮುಂತಾದವು ಮಳೆ ಏರುಪೇರಿಗೆ ಉತ್ತಮವಾಗಿ ಹೊಂದಿಕೊಳ್ಳುವ ಗುಣ ಹೊಂದಿವೆ. ದೊಡ್ಡಿ ಭತ್ತ, ದೊಡ್ಡಭೈರನೆಲ್ಲು ಮುಂತಾದ ಭತ್ತದ ತಳಿಗಳು ವಿಷಮ ಪರಿಸ್ಥಿತಿಯನ್ನು ಎದುರಿಸುವಲ್ಲಿ ಸುಧಾರಿತ